


ಚಿರಂಜೀವಿ

ದಿ.ಜಯಲಲಿತಾ

ಸ್ವಾಭಿಮಾನವನ್ನು ಬಡಿದೆಬ್ಬಿಸಿದವರು. ಅವರು ಚೈತನ್ಯ ರಥ ಏರಿ ರಾಜ್ಯದ ಉದ್ದಗಲ ಸುತ್ತಿ ಒಮ್ಮಿಂದೊಮ್ಮೆಲೇ ಆಂಧ್ರಪ್ರದೇಶದ ಮುಖ್ಯಮಂತ್ರಿ ಗದ್ದುಗೆಯೇರಿದಾಗ, ನಾಡಿನಾದ್ಯಂತ ಜನತಂತ್ರವಾದಿಗಳಲ್ಲಿ ಹೊಸದೊಂದು ಆಶಾಭಾವ ಮೂಡಿದ್ದು ಸುಳ್ಳಲ್ಲ. 'ಎನ್‌ಟಿಆರ್ ದೇಶದ ರಾಜಕೀಯ ನಡಾವಳಿಯನ್ನೇ ಬದಲಿಸಿಯಾರು, ಸರ್ವಾಧಿಕಾರದ ಆತ್ಮ ಪಡೆಯುತ್ತಿದ್ದ ರಾಜಕೀಯ ನುಡಿಗಟ್ಟಿಗೆ ಬದಲಿ ತಂದಾರು' ಎಂದು ಅನೇಕರು ಆಗ ಅರಳುಗಣ್ಣಾಗಿದ್ದರು. ಅದರಲ್ಲೂ ಅವರ ಸರ್ಕಾರ ಉರುಳಿಸಲು ಇಂದಿರಾ ಕಾಂಗ್ರೆಸ್ ಯತ್ನಿಸಿದಾಗ ದೇಶಾದ್ಯಂತ ಭುಗಿಲೆದ್ದ ಆಕ್ರೋಶವಂತೂ ಅಸಾಧಾರಣವಾದದ್ದು.

ಮೊದಮೊದಲು ಎನ್‌ಟಿಆರ್ ಕೂಡ ಭಿನ್ನ ದನಿಯಲ್ಲಿ ಮಾತನಾಡಿದರು. ಮೊದಲಿಗೆ ಆಂಧ್ರವನ್ನು ಬಾಧಿಸುತ್ತಿದ್ದ ನಕ್ಸಲೀಯರ ಸಮಸ್ಯೆಯನ್ನು ಸಹಾನುಭೂತಿಯಿಂದ ಕಂಡು ಅದರ ರಾಜಕೀಯ ಆರ್ಥಿಕ ಹಿನ್ನೆಲೆಯನ್ನು ತಡಕಿದವರು, ಕೊನೆಗೆ ಆಂಧ್ರದ ರಕ್ತದಲ್ಲಿ ಬೆರೆತುಹೋದ ಪಾಳೇಗಾರಿಕೆ ಸಂಸ್ಕೃತಿಗೆ ಯಾವ ಉತ್ತರವನ್ನೂ ಹುಡುಕಲಾಗದೆ, ಎರಡು ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಸುಲಭ ಜನಪ್ರಿಯ ಕಾರ್ಯಕ್ರಮದ ಮೊರೆ ಹೋದರು.

ಮೈಯೆಲ್ಲ ನೀಲಿ ಬಳಿದುಕೊಂಡು ತೆರೆಯ ಮೇಲೆ ರಾಮ– ಕೃಷ್ಣರ ಅವತಾರದಲ್ಲಿ ಕಂಗೊಳಿಸಿದ ಎನ್‌ಟಿಆರ್‌ಗೆ ನಟನಾಗಿಯೇ ಮತ್ತೊಂದು ಇಮೇಜ್ ಇತ್ತು– ಅವರು ಸಾಮಾಜಿಕ ಚಿತ್ರಗಳಲ್ಲಿ ತಳೆದ ಅವತಾರ. ಕೆಂಪು ಕೋಟು, ಹಳದಿ ಬೆಲ್ಟು, ಹಸಿರು ಪ್ಯಾಂಟು, ಕಣ್ಣಿಗೆ ಆರು ಮೂಲೆಯ ಕೂಲಿಂಗ್ ಗ್ಲಾಸ್ ಧರಿಸಿ, ತಮ್ಮ ಅರ್ಧ ವಯಸ್ಸಿನ ಹೀರೋಯಿನ್‌ಗಳೊಂದಿಗೆ ಕುಣಿಯುತ್ತಿದ್ದ ಅವರ ಹಾಸ್ಯಾಸ್ಪದ ಭಂಗಿಗಳನ್ನೇನೋ ಆಗ ಅವರ ಪೌರಾಣಿಕ ಪಾತ್ರಗಳ ಪ್ರಭೆ ಮಸುಕು ಮಾಡಿತ್ತು. ಆದರೆ ಬರಬರುತ್ತ ಅವರ ರಾಜಕೀಯ ಶಕ್ತಿಯೂ ತಮ್ಮ ಅಸಂಖ್ಯಾತ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಪರಿವಾರವನ್ನು ಬೆಳೆಸುವ ಕಡೆ ವಿನಿಯೋಗವಾಯಿತು. ಸ್ವತಃ ಎನ್‌ಟಿಆರ್ ಸರ್ವಾಧಿಕಾರಿ ಧೋರಣೆ ಪ್ರದರ್ಶಿಸತೊಡಗಿದಾಗ ಅವರೂ ಸಾಧಾರಣ ಪುಢಾರಿಯಾಗಿ ಕಾಣತೊಡಗಿದರು. ಎರಡನೇ ಮದುವೆ, ಆ ಪತ್ನಿಗೆ ರಾಜಕೀಯ ಸ್ಥಾನಮಾನ ಕಲ್ಪಿಸಲು ಅವರು ವಹಿಸಿದ ಮುತುವರ್ಜಿ, ಅಳಿಯ ಚಂದ್ರಬಾಬು ನಾಯ್ಡು ಬಂಡಾಯ— ನಮ್ಮ ನಾಡಿನ ಯಾವುದೇ ಪಕ್ಷದಲ್ಲಿ ಸರ್ವೇಸಾಮಾನ್ಯವಾಗಿ ಕಾಣುವ ವಿದ್ಯಮಾನಗಳಿವು. ಅಂತೂ ಕೊನೆಗೆ ರಾಜಕೀಯ ವಿಮೋಚನೆಯ ಆಸೆ ಕಮರಿಹೋಗಿತ್ತು; ಪಂಚತಂತ್ರದ ನರಿಯ ಕತೆಯ ಹಾಗೆ, ಎನ್‌ಟಿಆರ್ ಮೈಗೆ ಬಳಿದ ನೀಲಿ ಬಣ್ಣವೂ ಕರಗಿಹೋಗಿತ್ತು..!

ಎನ್.ಟಿ. ರಾಮರಾಯರಿಗೆ ಒಂದು ಲೆಕ್ಕಕ್ಕೆ ತಮಿಳುನಾಡಿನ ಎಂ.ಜಿ. ರಾಮಚಂದ್ರನ್‌ರ ಗೆಲುವಿನ ಪಯಣವೇ ಸ್ಫೂರ್ತಿಯಾದರೂ, ತಮಿಳುನಾಡಿನ ರಾಜಕೀಯದ ಸತ್ವವೇ ಬೇರೆ. ಅಲ್ಲಿ ಮೊದಲಿಂದಲೂ ಸಿನಿಮಾ ಮತ್ತು ರಾಜಕೀಯ–, ಸಾರ್ವಜನಿಕ ಬದುಕಿನ ಅವಳಿ ಜವಳಿ ಕವಲುಗಳು.

ಅಲ್ಲಿ ದ್ರಾವಿಡ ಚಳವಳಿ ಚಿಗುರೊಡೆಯುತ್ತಿದ್ದ ಹಾಗೆಯೇ, ಅಣ್ಣಾದೊರೈ ಥರದ ವರ್ಚಸ್ವಿ ನಾಯಕರು ಸಿನಿಮಾ ಮತ್ತು ರಂಗಭೂಮಿಗಳನ್ನೂ ತಮ್ಮ ರಾಜಕೀಯಕ್ಕೆ ಪೂರಕವಾಗಿ ಬಳಸಿಕೊಳ್ಳತೊಡಗಿದರು. ದ್ರಾವಿಡ ಸಂದೇಶಗಳೇ ಸಿನಿಮಾಗಳ ತಿರುಳಾಗತೊಡಗಿದವು.

ಈ ಎಲ್ಲ ಚಿಂತನೆ ಹರಳುಗಟ್ಟಿದ್ದು ಎಂ.ಜಿ. ರಾಮಚಂದ್ರನ್ನರ ಬೆಳ್ಳಿತೆರೆಯ ವ್ಯಕ್ತಿತ್ವದಲ್ಲಿ. ಎಂಜಿಆರ್, ತಳವರ್ಗದಿಂದ ಬಂದ ದುಡಿದುಣ್ಣುವ ಸಮುದಾಯದ ಪ್ರತಿನಿಧಿ. ಹೆಣ್ಣುಮಕ್ಕಳ ರಕ್ಷಕ. ಸಮುದಾಯದ ಏಳಿಗೆಗೆ ಶಿಕ್ಷಣವೇ ಮೆಟ್ಟಿಲು ಎಂಬುದನ್ನು ಅರಿತ ವಿವೇಕಿ. ಅವರ ಅಭಿನಯದ ಬಹುತೇಕ ಚಿತ್ರಗಳಲ್ಲಿ ಇದೇ ಅವರು ನಿರ್ವಹಿಸಿದ ನಾಯಕ ಪಾತ್ರದ ಜೀವಾಳ. ಈ ಇಮೇಜ್ ಬಲದೊಂದಿಗೆ ಎಣೆಯಿಲ್ಲದ ಜನಪ್ರೀತಿಗೆ ಪಾತ್ರರಾದ ಎಂಜಿಆರ್, ತಮ್ಮ ಮಿಕ್ಕೆಲ್ಲ ಸಹಚರರಿಗಿಂತ ಸದಾ ನೂರು ಹೆಜ್ಜೆ ಮುಂದೆಯೇ ಇದ್ದವರು. (ಉದಾಹರಣೆಗೆ ಇವರಷ್ಟೇ ಜನಪ್ರಿಯ ನಟರಾಗಿದ್ದ ಶಿವಾಜಿ ಗಣೇಶನ್‌ರಂಥವರೂ



